ಶ್ರೀ ವೀರೇಂದ್ರ ಪಾಟೀಲ್.—ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟನ್ನು ನಾವು ಮಾಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಸದಸ್ಯರಿಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಪರಿಶೀಲನೆ ಮಾಡಬೇಕಾಗುತ್ತದೆ. ಲಿಫ್ಟ್ ಇರಿಗೇಷನ್ ಸ್ಕೀಮನ್ನು ಮಂಜೂರು ಮಾಡುತ್ತೇವೆ ಎಂದು ಅವರು ಹೇಳಿರಲಾರರು ಎಂದು ನನಗನ್ನಿಸುತ್ತದೆ. ಲಿಫ್ಟ್ ಇರಿಗೇಷನ್ ಫ್ಲೋ ಇರಿಗೇಷನ್‌ಗಿಂತಲೂ ಹೆಚ್ಚು ಖರ್ಚು ಬೀಳುವಂಥದ್ದು. ಬಹುಶಃ ಫ್ಲೋ ಇರಿಗೇಷನ್‌ಗೆ 15 ರೂಪಾಯಿ ಖರ್ಚಾದರೆ ಲಿಫ್ಟ್ ಇರಿಗೇಷನ್ನಿಗೆ 60—70 ರೂಪಾಯಿ ಆಗುತ್ತದೆ. ಈ ಹೆಚ್ಚು ಖರ್ಚನ್ನು ರೈತರು ಕೊಡುವುದಕ್ಕೆ ತಯಾರಾಗಬೇಕಾಗುತ್ತದೆ. ಲಿಫ್ಟ್ ಇರಿಗೇಷನ್ ಕೆಲಸಗಳನ್ನು ಯಾರು ಮೇಂಟೇನ್ ಮಾಡಬೇಕು ಎನ್ನುವ ವಿಚಾರಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಅದಕ್ಕಾಗಿ ಹೋದ ಸಲ ಹೊಳೆನರಸೀಪುರದ ಮಾನ್ಯ ಸದಸ್ಯರು 11 ಯೋಜನೆಗಳನ್ನು ಏಕೆ ತೆಗೆದುಕೊಳ್ಳಲಿಲ್ಲ ಎಂದು ಕೇಳಿದಾಗ ನಾವು ಅಲ್ಲಿಗೆ ಹೋಗಿ ಜನರನ್ನು ಕೇಳಿದ್ದೇವೆ, ಮಾನ್ಯ ಸದಸ್ಯರನ್ನೂ ಕೇಳಿದ್ದೇವೆ. ಎಲ್ಲ ಫ್ಲೋ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಡೆಗಳಲ್ಲಿ ಮಾತ್ರ ಲಿಫ್ಟ್ ಇರಿಗೇಷನ್ ಕೊಡುವುದು, ಫ್ಲೋ ಇರಿಗೇಷನ್ ಇರುವ ಕಡೆ ಲಿಫ್ಟ್ ಇರಿಗೇಷನ್ ಕೊಡುವುದಿಲ್ಲ. ನಾನು ಮತ್ತು ಹಣಕಾಸಿನ ಸಚಿವರು ಆ ಭಾಗಕ್ಕೆ ಹೋಗಿ ಬಂದ ಮೇಲೆ 27—28 ಲಕ್ಷ ರೂಪಾಯಿಗಳ ಕೆಲಸ ಕಾರ್ಯಗಳನ್ನು ಹಾಸನ ಜಿಲ್ಲೆಯಲ್ಲಿ ಮಾಡಿದ್ದೇವೆ. ಅದರಲ್ಲಿಯೂ ಮಾನ್ಯ ಎಮರು ಪಕ್ಷದ ನಾಯಕರ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ.

Sri K. LAKKAPPA.—Is it not the intention of the Government that lift irrigation should be taken more in number in famine belts like Kolar, Tumkur and Chitradurga ?

Sri VEERENDRA PATIL.—Wherever it is possible, wherever it is feasible they will be taken up.

Feeder channel to Kanva Reservoir.

*Q.—17. Sri B. J. LINGE GOWDA (Channapatna).—

Will the Minister for Public Works be pleased to state :—

what action has been taken for providing a feeder channel to Kanva Reservoir from the proposed Manchanabele Project ?

A.—Sri VEERENDRA PATIL (Minister for Public Works).—

An estimate amounting to Rs. 316.78 lakhs is now prepared for construction of Manchanabele Reservoir Project as a flood-*cum*-irrigation project. A sum of Rs. 49.87 lakhs is provided in this estimate towards the feeder channel from Manchanabele to Kanava Reservoir.

ಶ್ರೀ ಬಿ. ಜೆ. ಲಿಂಗೇಗೌಡ.—ಕೇಂದ್ರ ನೀರಾವರಿ ಸಚಿವರಾದ ಕೆ. ಎಲ್. ರಾವ್ ಅವರು ಇತ್ತೀಚೆಗೆ ಮೈಸೂರು ರಾಜ್ಯಕ್ಕೆ ಭೇಟಿ ಕೊಟ್ಟಾಗ ಮಂಚನಬೆಲೆ ಜಲಾಶಯದ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟ ಕೂಡಲೇ ಪ್ರವಾಹ ನಿಯಂತ್ರಣ ನಿಧಿಯಿಂದ ಹಣವನ್ನು ಆ ಯೋಜನೆಗೆ ಒದಗಿಸಿಕೊಡುವುದಾಗಿ ಭರವಸೆಯನ್ನು ಕೊಟ್ಟಿದ್ದುದ್ದು ಸರ್ಕಾರದ ಗಮನದಲ್ಲಿಯೇ ? ಈ ದಿಸೆಯಲ್ಲಿ ಏನು ಕಾರ್ಯಕ್ರಮವನ್ನು ಸರ್ಕಾರದವರು ಕೈಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಪ್ರವಾಹ ನಿಯಂತ್ರಣ ನಿಧಿಯಿಂದ ಹಣವನ್ನು ಈ ಯೋಜನೆಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಕೇಂದ್ರ ನೀರಾವರಿ ಮಂತ್ರಿಯವರು ಹೇಳಿದ್ದಾರೆ. ಅವರು ಹೇಳಿದ ಪ್ರಕಾರ ಈ ಯೋಜನೆಗೆ ಸಂಬಂಧಪಟ್ಟ ಹಾಗೆ ಪ್ರಾಜೆಕ್ಟ್ ರಿಪೋರ್ಟನ್ನು ತಯಾರಿಸಿ 16ನೇ ಸೆಪ್ಟೆಂಬರ್ 1966ರಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ.